**060/2022-K**

Maximum : 100 marks

Time : 1 hour and 15 minutes

1. ಮಲಯಾಳಂ ಭಾಷೆ ಮತ್ತು ಸಂಸ್ಕೃತಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಾರ ಮಾಡಲು ಕೇರಳ ಸರ್ಕಾರವು ಹಾಕಿಕೊಂಡಿರುವ ಯೋಜನೆಯು ಯಾವುದು?
   - (A) ಭಾಷಾ ಮಿಶನ್ (ಆಯೋಗ)
   - (B) ಮಲಯಾಳ ವೇದಿ
   - (C) ಮಲಯಾಳಂ ಮಿಶನ್ (ಆಯೋಗ)
   - (D) ಸರ್ಗ ಕೈರಳಿ

2. 'ಮೀಸಾ' ಕಾದಂಬರಿಯ ಲೇಖಕರು :
   - (A) ಎಸ್. ಸುಧೀಶ್
   - (B) ಸುಭಾಷ್ ಚಂದ್ರನ್
   - (C) ಸಂತೋಷ್ ಎಚಿಕ್ಕನಮ್
   - (D) ಎಸ್. ಹರೀಶ್

3. ಕೆ. ಫೋನ್ ಪ್ರಾಜೆಕ್ಟ್ (ಯೋಜನೆ)ನ ವಿವರಣಾ ವಾಕ್ಯವು ಈ ರೀತಿ ಇದೆ :
   - (A) ಎಲ್ಲಾ ಮನೆಗಳಿಗೂ ಸಂಚಾರಿ ದೂರವಾಣಿ ಸೇವೆ
   - (B) ಎಲ್ಲಾ ಮನೆಗಳಿಗೂ ಅತಿವೇಗ ಅಂತರ್ಜಾಲ ಸೌಲಭ್ಯ
   - (C) ಎಲ್ಲಾ ಮನೆಗಳಿಗೂ ಲ್ಯಾಂಡ್ ಲೈನ್ ದೂರವಾಣಿ ಸಂಪರ್ಕ ಸೌಲಭ್ಯ
   - (D) ಎಲ್ಲಾ ಮನೆಗಳಿಗೂ ವೈರ್‌ಲೆಸ್ ಸಂಪರ್ಕ ಸೇವೆ

4. ಪ್ರಥಮ ಪಂಚವಾರ್ಷಿಕ ಯೋಜನೆಯು ಜಾರಿಯಾದ ವರ್ಷ
   - (A) 1950
   - (B) 1951
   - (C) 1957
   - (D) 1960

5. ಕೋವಿಡ್–19ಗೆ ಸಂಬಂಧಿಸಿದಂತೆ ಸರ್ಕಾರವು ಹಮ್ಮಿಕೊಂಡ ಮೊಬೈಲ್ ಅಪ್ಲಿಕೇಶನ್ :
   - (A) ಆರೋಗ್ಯ ಸೇತು
   - (B) ಆರೋಗ್ಯ ಮಿತ್ರ
   - (C) ಆರೋಗ್ಯ ಪರಿಪಾಲಕ
   - (D) ಆರೋಗ್ಯ ಮಂತ್ರ

6. ಕೇರಳ ಆರೋಗ್ಯ ವಿಶ್ವವಿದ್ಯಾಲಯದ ಪ್ರಧಾನ ಕಛೇರಿ ಇರುವುದೆಲ್ಲಿ?
   - (A) ತ್ರಿಚೂರ್
   - (B) ತಿರುವನಂತಪುರಂ
   - (C) ಕೊಚ್ಚಿನ್
   - (D) ಕ್ಯಾಲಿಕಟ್ (ಕಲ್ಲಿಕೋಟೆ)

7. 'ಅಂಕಿತಾ ರೈನಾ' ಅವರು ಯಾವ ಕ್ರೀಡಾ ವಿಭಾಗದಲ್ಲಿ "ಅರ್ಜುನ ಪ್ರಶಸ್ತಿ"ಯನ್ನು ಗಳಿಸಿದರು?
   - (A) ಕ್ರಿಕೆಟ್
   - (B) ಫುಟ್‌ಬಾಲ್ (ಕಾಲ್ಚೆಂಡು)
   - (C) ಟೆನ್ನಿಸ್
   - (D) ಕಬಡ್ಡಿ

8. “ಕುಟುಂಬ ಶ್ರೀ” ಯೋಜನೆ (ಪ್ರಾಜೆಕ್ಟ್)ಯ ಮುಖ್ಯ ಉದ್ದೇಶ ಯಾವುದು?
(i) ಬಡತನ ನಿರ್ಮೂಲನೆ
(ii) ಎಳೆಯ ಮಕ್ಕಳಿಗೆ (ಶಿಶುಗಳಿಗೆ) ಪೌಷ್ಟಿಕ ಆಹಾರ ಒದಗಿಸುವುದು
(iii) ಮಹಿಳಾ ಸಬಲೀಕರಣ
(iv) ಸಾಲವನ್ನು ವಿತರಿಸುವುದು
(A) (i) ಮತ್ತು (ii)
(B) (ii) ಮತ್ತು (iii)
(C) (iii) ಮತ್ತು (iv)
(D) (i) ಮತ್ತು (iii)

9. ರಜತಾ ರೇಖಾ ಯೋಜನೆ (ಸಿಲ್ವರ್ ಲೈನ್ ಯೋಜನೆಯು) ಯಾವ ಜಿಲ್ಲೆಯನ್ನು ಒಳಗೊಂಡಿಲ್ಲ?
(A) ಕ್ಯಾಲಿಕಟ್ (ಕಲ್ಲಿ ಕೋಟೆ)
(B) ತ್ರಿಚೂರ್
(C) ಪತ್ತಣಂ ತಿಟ್ಟಾ
(D) ಕೊಟ್ಟಾಯಂ

10. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಈಗಿನ ಅಧ್ಯಕ್ಷರು ಯಾರು ?
(A) ಎಸ್. ಸೋಮನಾಥ್
(B) ಕೆ. ಶಿವನ್
(C) ಕೆ. ರಾಧಾಕೃಷ್ಣನ್
(D) ಜಿ. ಮಾಧವನ್ ನಾಯರ್

11. ವಿಂಧ್ಯ ಪರ್ವತದಿಂದ ಭಾರತೀಯ ಉಪಖಂಡದ ದಕ್ಷಿಣ ತುತ್ತ ತುದಿಯವರೆಗೆ ವ್ಯಾಪಿಸಿರುವ ವಿಶಾಲವಾದ ಭೂ ಪ್ರದೇಶ/ಭೂ ಭಾಗ ಯಾವುದು?
(A) ಮಾಲ್ವಾ ಪ್ರಸ್ಥಭೂಮಿ
(B) ಛೋಟಾ ನಾಗಪುರ ಪ್ರಸ್ಥಭೂಮಿ
(C) ದಖ್ಖನ್ ಪ್ರಸ್ಥಭೂಮಿ
(D) ಪೂರ್ವ ಘಟ್ಟ ಪ್ರದೇಶ

12. ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮ ನಾನ್ ಕನ್‌ವೆನ್‌ಶನಲ್ ಶಕ್ತಿ ಮೂಲವಾಗಿದೆ?
(i) ಸೌರ ಶಕ್ತಿ
(ii) ಜೈವಿಕ ಅನಿಲ ಮತ್ತು ಸೌರ ಶಕ್ತಿ
(iii) ಮಾರುತ ಶಕ್ತಿ
(A) (i)
(B) (i) ಮತ್ತು (ii)
(C) (i), (ii) ಮತ್ತು (iii)
(D) ಇವು ಯಾವುದೂ ಅಲ್ಲ

13. ಭಾರತದೊಂದಿಗೆ ಭೂಗಡಿಯನ್ನು ಹಂಚಿಕೊಳ್ಳುವ ನೆರೆ ರಾಷ್ಟ್ರಗಳು ಯಾವುವು?
(i) ಚೀನಾ
(ii) ನೇಪಾಳ
(iii) ಪಾಕಿಸ್ತಾನ
(iv) ಭೂತಾನ್
(A) (i) ಮತ್ತು (iv)
(B) (ii) ಮತ್ತು (iii)
(C) (iv) ಮತ್ತು (iii)
(D) (i), (ii), (iii) ಮತ್ತು (iv)

14. ಭಾರತದ ಅತ್ಯಂತ ಎತ್ತರ ಪರ್ವತ ಶಿಖರ
(A) ಎವರೆಸ್ಟ್ ಶಿಖರ
(B) ಮೌಂಟ್ K2
(C) ನಂದಾ ದೇವಿ
(D) ಇವು ಯಾವುದೂ ಅಲ್ಲ

15. ಭಾರತದ ಯಾವ ರಾಜ್ಯದಲ್ಲಿ "ಮಣಿಕ್ಕಾರನ್ ಸೌರಶಕ್ತಿ ಕೇಂದ್ರ" ಇದೆ?

(A) ಕರ್ನಾಟಕ
(B) ಕೇರಳ
(C) ಗುಜರಾತ್
(D) ಹಿಮಾಚಲ ಪ್ರದೇಶ

16. ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರ ನದಿಗಳಿಂದ ಉಂಟಾಗಿರುವ ಏಕ ಪ್ರಸ್ಥಭೂಪ್ರದೇಶ ಯಾವುದು?

(A) ಉತ್ತರದ ಮಹಾ ಬಯಲು ಪ್ರದೇಶ
(B) ಭಾರತೀಯ ಮರುಭೂಮಿ
(C) ಕರಾವಳಿ ಬಯಲು ಪ್ರದೇಶಗಳು
(D) ದಖ್ಖನ್ ಪ್ರಸ್ಥಭೂಮಿ

17. ಭಾರತದಲ್ಲಿನ ಅತ್ಯಂತ ದೊಡ್ಡದಾದ (ಬೃಹತ್) ಮತ್ತು ಹಳೆಯ ಉಕ್ಕು ಕಾರ್ಖಾನೆ ಯಾವುದು?

(A) ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ
(B) ಭಾರತೀಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ
(C) ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ
(D) ರೂರ್‌ಕೆಲಾ ಉಕ್ಕಿನ ಕಾರ್ಖಾನೆ

18. ಭಾರತದ ಮೂಲಕ ಹಾದುಹೋಗುವ ಮುಖ್ಯ ಅಕ್ಷಾಂಶ ರೇಖೆ ಯಾವುದು?

(A) ಕರ್ಕಾಟಕ ಸಂಕ್ರಾಂತಿ ವೃತ್ತ ($23\frac{1}{2}^\circ$ N)
(B) ಮಕರ ಸಂಕ್ರಾಂತಿ ವೃತ್ತ ($23\frac{1}{2}^\circ$ S)
(C) ಆರ್ಕ್‌ಟಿಕ್ ವೃತ್ತ ($66\frac{1}{2}^\circ$ N)
(D) ಅಂಟಾರ್ಕ್ಟಿಕ್ ವೃತ್ತ ($66\frac{1}{2}^\circ$ S)

19. ಭಾರತದಲ್ಲಿನ ಅತ್ಯಂತ ಉದ್ದವಾದ ರಾಷ್ಟ್ರೀಯ ಹೆದ್ದಾರಿ ಯಾವುದು?

(A) NH-1
(B) NH-44
(C) NH-6
(D) NH-8

20. ಮುಂಬಯಿ ಮತ್ತು ಮಂಗಳೂರನ್ನು ಸಂಪರ್ಕಿಸುವ ಪಶ್ಚಿಮ ಕರಾವಳಿಯಲ್ಲಿ ಹಾದು ಹೋಗುವ ಪ್ರಮುಖ ರೈಲ್ವೆ ಲೈನ್ ಯಾವುದು?

(A) ಉತ್ತರ ರೈಲ್ವೆ
(B) ದಕ್ಷಿಣ ರೈಲ್ವೆ
(C) ಮೆಟ್ರೋ ರೈಲ್ವೆ
(D) ಕೊಂಕಣ ರೈಲ್ವೆ

21. ಅಸ್ಪೃಶ್ಯತಾ ನಿರೋಧ ಕಾಯ್ದೆ ಜಾರಿಗೆ ಬಂದ ವರ್ಷ :

(A) 1951
(B) 1953
(C) 1955
(D) 1957

22. ಕಾನೂನು ಬಾಹಿರ ನಾಗರೀಕರ ಬಂಧನದ ವಿರುದ್ಧ ಸುಪ್ರೀಮ್ ಕೋರ್ಟ್ ಮತ್ತು ಹೈ ಕೋರ್ಟ್‌ಗಳು ಹೊರಡಿಸಿದ ಆದೇಶ :

(A) ಹೇಬಿಯಸ್ ಕಾರ್ಪಸ್ ಕಾಯ್ದೆ
(B) ಪ್ರಾಹಿಬಿಷನ್ (ಪಾನ ನಿರೋಧ) ಕಾಯ್ದೆ
(C) ಸೆರ್ಶಿಯೋರರಿ
(D) ಮ್ಯಾಂಡಮಸ್ ಕಾಯ್ದೆ

23. ಭಾರತದ ಸಂವಿಧಾನವು ಎಷ್ಟು ರೀತಿಯ ಮಾನವ ಹಕ್ಕುಗಳನ್ನು ಖಾತರಿಗೊಳಿಸಿದೆ?

(A) 9
(B) 8
(C) 7
(D) 6

24. ಸಂವಿಧಾನದ ಎಷ್ಟನೇಯ ತಿದ್ದುಪಡಿಯ ಮೂಲಕ ಪ್ರಾಥಮಿಕ ಕರ್ತವ್ಯಗಳನ್ನು ಭಾರತದ ಸಂವಿಧಾನದಲ್ಲಿ ಸೇರಿಸಲಾಯಿತು?

(A) 40ನೇ ತಿದ್ದುಪಡಿ
(B) 42ನೇ ತಿದ್ದುಪಡಿ
(C) 44ನೇ ತಿದ್ದುಪಡಿ
(D) 46ನೇ ತಿದ್ದುಪಡಿ

25. ಭಾರತದ ರಾಷ್ಟ್ರಧ್ವಜವಾದ "ತ್ರಿವರ್ಣ ಧ್ವಜ"ವನ್ನು ಭಾರತದ ಸಂವಿಧಾನದ ಸಭೆಯಲ್ಲಿ ಯಾವ ವರ್ಷ ಅಂಗೀಕರಿಸಲಾಯಿತು?

(A) 1946 ರ ಡಿಸೆಂಬರ್ 6
(B) 1947 ರ ಜುಲೈ 22
(C) 1949 ರ ನವೆಂಬರ್ 26
(D) 1950 ರ ಜನವರಿ 26

26. ಭಾರತದ ರಾಷ್ಟ್ರೀಯ ನದಿ ಯಾವುದು?

(A) ಗಂಗಾ
(B) ಯಮುನಾ
(C) ಕಾವೇರಿ
(D) ಬ್ರಹ್ಮಪುತ್ರ

27. ಭಾರತದ ರಾಷ್ಟ್ರಗೀತೆಯನ್ನು ರಚಿಸಿದವರು ಯಾರು?

(A) ಜವಹರಲಾಲ್ ನೆಹರೂ
(B) ರವೀಂದ್ರ ನಾಥ ಠಾಕೂರ್
(C) ಬಂಕಿಂ ಚಂದ್ರ ಚಟರ್ಜಿ
(D) ಕಬೀರ್ ದಾಸರು

28. ಭಾರತದ ರಾಷ್ಟ್ರಗೀತೆಯನ್ನು ಹಾಡುವ ಕಾಲಾವಧಿ :

(A) 50 ಸೆಕೆಂಡುಗಳು
(B) 52 ಸೆಕೆಂಡುಗಳು
(C) 54 ಸೆಕೆಂಡುಗಳು
(D) 56 ಸೆಕೆಂಡುಗಳು

29. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಮೊದಲ ಅಧ್ಯಕ್ಷರು ಯಾರು?

(A) ಟಿ.ಎನ್. ಶೇಷನ್
(B) ಸುಕುಮಾರ್ ಸೇನ್
(C) ಜಸ್ಟೀಸ್ ರಂಗನಾಥ ಮಿಶ್ರಾ
(D) ಜಸ್ಟೀಸ್ ಕೆ.ಜಿ. ಬಾಲಕೃಷ್ಣನ್

30. 1990 ರಲ್ಲಿ ಮಾಹಿತಿ ಹಕ್ಕಿಗಾಗಿ ಪ್ರಮುಖ ಚಳುವಳಿ ಆರಂಭಿಸಿದ ಸಂಸ್ಥೆಯು :

(A) ಚಿಪ್ಕೋ ಚಳುವಳಿ
(B) ಭಾರತೀಯ ರೈತ ಸಂಘ (ಭಾರತೀಯ ಕಿಸಾನ್ ಯೂನಿಯನ್)
(C) ನರ್ಮದಾ ಬಚಾವೋ ಆಂದೋಲನ
(D) ಕೂಲಿಕಾರ ರೈತರ ಶಕ್ತಿ ಸಂಘಟನೆ (ಮಜದೂರ್ ಕಿಸಾನ್ ಶಕ್ತಿ ಸಂಘಟನೆ)

31. ಇವುಗಳನ್ನು ಹೊಂದಿಸಿ ಬರೆಯಿರಿ :

| | | | |
|---|---|---|---|
| 1. | ಬ್ರಹ್ಮ ಸಮಾಜ | i | ದಯಾನಂದ ಸರಸ್ವತಿ |
| 2. | ಆರ್ಯ ಸಮಾಜ | ii | ಆತ್ಮಾರಾಂ ಪಾಂಡು ರಂಗೆ |
| 3. | ಪ್ರಾರ್ಥನಾ ಸಮಾಜ | iii | ಕೇಶವ್ ಚಂದ್ರ ಸೇನ್ |
| 4. | ಭಾರತೀಯ ಬ್ರಹ್ಮರ ಸಮಾಜ | iv | ರಾಜಾರಾಂ ಮೋಹನ್ ರಾಯ್ |

(A) 1-iv, 2-i, 3-ii, 4-iii
(B) 1-ii, 2-iv, 3-i, 4-iii
(C) 1-i, 2-iii, 3-iv, 4-ii
(D) 1-iii, 2-i, 3-ii, 4-iv

32. ಮಹಾತ್ಮ ಗಾಂಧೀಯವರ ನಾಯಕತ್ವದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಡೆಸಿದ ಕೊನೆಯ ಸತ್ಯಾಗ್ರಹ ಯಾವುದು?

(A) ಬರ್ದೋಲಿ ಸತ್ಯಾಗ್ರಹ
(B) ಉಪ್ಪಿನ ಸತ್ಯಾಗ್ರಹ
(C) ಅಸಹಕಾರ ಚಳುವಳಿ
(D) ಭಾರತ ಬಿಟ್ಟು ತೊಲಗಿ ಚಳುವಳಿ

33. "ಸಂತಾಲ್ ಚಳುವಳಿ (ಸತ್ಯಾಗ್ರಹ)" ಯಾವ ವರ್ಷ ನಡೆಯಿತು?

(A) 1854-1855
(B) 1855-1856
(C) 1856-1857
(D) 1857-1858

34. ರಾಷ್ಟ್ರೀಯ ನೀತಿ ನಿಯಮಗಳ ತೊಟ್ಟಿಲು ಎಂದು ಯಾವ ರಾಜ್ಯವು ಹೆಸರಾಗಿದೆ?

(A) ದೆಹಲಿ
(B) ಮದರಾಸು
(C) ಬಂಗಾಳ
(D) ಬೊಂಬಾಯಿ

35. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಒಬ್ಬರೇ ಒಬ್ಬ ಮಲೆಯಾಳೀ ನಾಯಕರು ಯಾರು?

(A) ಕೆ. ಕೇಳಪ್ಪನ್
(B) ಸಿ. ಶಂಕರನ್ ನಾಯರ್
(C) ಕೆ.ಪಿ. ಕೇಶವ ಮೆನನ್
(D) ಪಟ್ಟಂ ಥಾನು ಪಿಳ್ಳೆ

36. ಪ್ರಥಮ ಸ್ವಾತಂತ್ರ್ಯದ ಸಂಗ್ರಾಮ ಪ್ರಾರಂಭವಾದದ್ದು ಯಾವಾಗ?

(A) 1857 ಫೆಬ್ರವರಿ 10
(B) 1857 ಮಾರ್ಚ್ 10
(C) 1857 ಏಪ್ರಿಲ್ 10
(D) 1857 ಮೇ 10

37. "ಕ್ವಿಟ್ ಇಂಡಿಯಾ ಡೇ" (ಭಾರತ ಬಿಟ್ಟು ತೊಲಗಿರಿ ದಿನ)ಎಂದು ಯಾವ ದಿನ ಹೆಸರಾಯಿತು?

(A) 5ನೇ ಆಗಸ್ಟ್ 1942
(B) 6ನೇ ಆಗಸ್ಟ್ 1942
(C) 8ನೇ ಆಗಸ್ಟ್ 1942
(D) 9ನೇ ಆಗಸ್ಟ್ 1942

38. "ಅತಿರ್ಥಿ ಗಾಂಧಿ" ಎಂದು ಹೆಸರಾದವರು ಯಾರು?

(A) ಖಾನ್ ಅಬ್ದುಲ್ ಗಾಫರ್ ಖಾನ್
(B) ಮೌಲಾನಾ ಅಬ್ದುಲ್ ಕಲಾಮ್ ಆಜಾದ್
(C) ಮೊಹಮ್ಮದ್ ಆಲಿ ಜಿನ್ನಾ
(D) ಮೊಹಮ್ಮದ್ ಅಬ್ದುಲ್ ರಹಮಾನ್

39. ಸ್ವಾತಂತ್ರ್ಯಾನಂತರ ಪೋರ್ಚುಗೀಸರಿಂದ ಗೋವಾವನ್ನು ಮುಕ್ತಗೊಳಿಸಲು ಭಾರತವು ಕೈಗೊಂಡ ರಕ್ಷಣಾ ಪರಿಕ್ರಮವನ್ನು ಏನೆಂದು ಕರೆಯುವರು?

(A) ಆಪರೇಶನ್ ಬ್ಲೂ ಸ್ಟಾರ್
(B) ಆಪರೇಶನ್ ವಿಜಯ್
(C) ಆಪರೇಶನ್ ಗಂಗಾ
(D) ಆಪರೇಶನ್ ಗೋವಾ

40. ರಾಜ್ಯಗಳ ಮರು ವಿಂಗಡನೆ ಆಯೋಗದ ಅಧ್ಯಕ್ಷರು ಯಾರು?

(A) ಫಸಲ್ ಅಲಿ
(B) ಸರ್ದಾರ್ ವಲ್ಲಭಾಯಿ ಪಟೇಲ್
(C) ಡಾ॥ ರಾಜೇಂದ್ರ ಪ್ರಸಾದ್
(D) ಜವಹರಲಾಲ್ ನೆಹರೂ

41. ಕೇರಳದ ಯಾವ ಪಕ್ಷಿಧಾಮವನ್ನು "ಹಸಿರು ಶ್ವಾಸ ಕೋಶಗಳೆಂದು" (ಹರಿತಾ ಶ್ವಾಸ ಕೋಶಂ) ಕರೆಯುತ್ತಾರೆ?

(A) ಮಂಗಳ ವನಂ (ಮಂಗಳಾ ಅರಣ್ಯ)
(B) ಆರಳಂ ವನ್ಯಮೃಗ ಧಾಮ
(C) ಚೆನ್ನಾರ್ ವನ್ಯ ಮೃಗ ಧಾಮ
(D) ಕುರಿಂಜಿಮಲೈ ವನ್ಯ ಮೃಗ ಧಾಮ

42. ಸಿಂಹಬಾಲದ ಕೋತಿಗಳ ಆವಾಸ ಸ್ಥಾನವನ್ನು ಯಾವುದು ನೋಡಿಕೊಳ್ಳುತ್ತಿದೆ?

(A) ದೇವಿ ಕುಲಂ ರಾಷ್ಟ್ರೀಯ ಉದ್ಯಾನ
(B) ಪೆರಿಯಾರ್ ವನ್ಯ ಜೀವಿ ಧಾಮ
(C) ಸೈಲೆಂಟ್ ವ್ಯಾಲಿ ರಾಷ್ಟ್ರೀಯ ಉದ್ಯಾನ (ನಿಶ್ಯಬ್ಧ ಕಣಿವೆಯ ರಾಷ್ಟ್ರೀಯ ಉದ್ಯಾನ)
(D) ಮತಿ ಕೆಟ್ಟಂ ಬೆಟ್ಟ

43. ಕೇರಳದಲ್ಲಿನ ಒಂದೇ ಒಂದು ಸಿಹಿನೀರಿನ ಸರೋವರ ಯಾವುದು?

(A) ವೆಂಬನಾಡ್ ಸರೋವರ
(B) ಸಾಸ್ಥಾಂ ಕೋಟೆ ಸರೋವರ
(C) ಅಷ್ಟಮುಡಿ ಸರೋವರ
(D) ಪೆರಿಯಾರ್ ಸರೋವರ

44. ಕೇರಳದಲ್ಲಿನ ಅತ್ಯಂತ ದೊಡ್ಡದಾದ ಜಲ ವಿದ್ಯುತ್ ಯೋಜನೆ ಯಾವುದು?

(A) ಮಲಂಪುಳ
(B) ಪೆರಿಂಗಳ ಕುತ್ತು
(C) ಪಲ್ಲಿವಾಸಲ್
(D) ಇಡುಕ್ಕಿ

45. ಕೇರಳದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ "ಮೀನುಗಾರಿಕೆ" ನಡೆಯುವ ಜಿಲ್ಲೆ ಯಾವುದು?

(A) ಎರ್ನಾಕುಲಂ
(B) ತ್ರಿಚೂರ್
(C) ಕ್ಯಾಲಿಕಟ್ (ಕಲ್ಲಿಕೋಟೆ)
(D) ಅಲೆಪ್ಪಿ

46. ಕೇರಳದಲ್ಲಿನ ಒಂದೇ ಒಂದು ಶ್ರೀಗಂಧದ ತಯಾರಿಕೆಯ ವಿಭಾಗ ಯಾವುದು?

(A) ತೇಕ್ಕಡಿ
(B) ಮೂನಾರ್
(C) ಮರೆಯೂರ್
(D) ನೀಲಂಬೂರ್

47. ಕೇರಳದಲ್ಲಿನ ಅತಿ ಹೆಚ್ಚು ನಗರ ಪ್ರದೇಶವಾಗಿರುವ ಜಿಲ್ಲೆ ಯಾವುದು?

(A) ಪಾಲಕ್ಕಾಡ್ (ಪಾಲ್‌ಘಾಟ್)

(B) ತಿರುವನಂತಪುರಂ

(C) ಎರ್ನಾಕುಲಂ

(D) ತ್ರಿಚೂರ್

48. ಕೇರಳದಲ್ಲಿನ ಅತ್ಯಂತ ಉದ್ದವಾದ ನದಿ ಯಾವುದು?

(A) ಭಾರತಪ್ಪುಳ

(B) ಪೆರಿಯಾರ್

(C) ಪಂಬಾ

(D) ಕಬಿನಿ

49. ಕೇರಳದಲ್ಲಿನ ಅತಿ ಹೆಚ್ಚು ಜನಸಂಖ್ಯೆಯುಳ್ಳ ಜಿಲ್ಲೆ ಯಾವುದು?

(A) ಕ್ಯಾಲಿಕಟ್ (ಕಲ್ಲಿಕೋಟೆ)

(B) ಮಲಪ್ಪುರಂ

(C) ಎರ್ನಾಕುಲಂ

(D) ಕೊಟ್ಟಾಯಂ

50. ಕೇರಳದಲ್ಲಿ 8 ರಿಂದ 18 ವರ್ಷದವರೆಗಿನ ಮಕ್ಕಳಿಗೆ ಈಜುಗಾರಿಕೆಯಲ್ಲಿ ತರಬೇತಿ ನೀಡುವ ಯೋಜನೆ ಯಾವುದು?

(A) ಸ್ಪ್ರಿಂಟ್

(B) ಹೂಪ್

(C) ಕಿಕ್ ಆಫ್

(D) ಸ್ಪ್ಲಾಶ್

51. ತಿರುವಿದಾಂಕೂರ್ ಮುಸಲ್ಮಾನ ಮಹಾಜನ ಸಭೆಯ ಸ್ಥಾಪಕರು ಯಾರು?

(A) ವಕ್ಕಂ ಅಬ್ದುಲ್ ಖಾದರ್ ಮೌಲ್ವಿ

(B) ಅಲಿ ಮುಸಲಿಯಾರ್

(C) ಮೊಹಮ್ಮದ ಅಬ್ದುಲ್ ರಹಮಾನ್

(D) ಘಾನ್ ಅಬ್ದುಲ್ ಗಾಫರ್ ಘಾನ್

52. ಕೇರಳದಲ್ಲಿ ನಡೆದ ಈ ಕೆಳಗಿನ ಚಳುವಳಿಗಳಲ್ಲಿ ಯಾವುದು ಭಾರತದ ಸ್ವಾತಂತ್ರ್ಯದ ಚಳುವಳಿಗೆ ಸಂಬಂಧಿಸಿದ್ದಲ್ಲ?

(A) ಕೈಯೂರ್ ದಂಗೆ

(B) ಮಲಬಾರ್ ದಂಗೆ

(C) ಉಪ್ಪಿನ ಸತ್ಯಾಗ್ರಹ

(D) ವೇಲುತಂಬಿ ದಂಗೆ

53. "ಆದಿಭಾಷಾ" ಗ್ರಂಥದ ಗ್ರಂಥ ಕರ್ತೃ (ಲೇಖಕರು) ಯಾರು?

(A) ಶ್ರೀ ನಾರಾಯಣ ಗುರು

(B) ಅಯ್ಯನ್ ಕಾಲಿ

(C) ಚಟ್ಟಂಬಿ ಸ್ವಾಮಿ

(D) ಸೋದರ ಅಯ್ಯಪ್ಪನ್

54. ಪೂಕೋಟ್ಟೂರ್ ಘಟನೆಯು ಯಾವ ಆಂದೋಳನಕ್ಕೆ ಸಂಬಂಧಪಟ್ಟಿದೆ?

(A) ವೈಕೊಂ ಸತ್ಯಾಗ್ರಹ

(B) ಮಲಬಾರ್ ದಂಗೆ

(C) ಪುನ್ನಪ್ರ ವಯಲಾರ್ ಆಂದೋಲನ

(D) ಚನ್ನಾರ್ ದೊಂಬಿ (ದಂಗೆ)

55. ಈ ಕೆಳಗಿನವುಗಳಲ್ಲಿ ಯಾವುದು ಗುಂಪಿಗೆ ಸೇರುವುದಿಲ್ಲ?

(A) ದೈವದಶಕಂ

(B) ದರ್ಶನಮಾಲಾ

(C) ಶಿವಶತಕಂ

(D) ನಿಜಾನಂದ ವಿಲಾಸಂ

56. ಕೇರಳದಲ್ಲಿ ಉಪ್ಪಿನ ಸತ್ಯಾಗ್ರಹಕ್ಕೆ ಪ್ರಮುಖವಾದ ಕೇಂದ್ರ ಯಾವುದಾಗಿತ್ತು?
(A) ಪಯ್ಯನೂರ್
(B) ತಲಿಪ್ಪರಂಬು
(C) ವಡಕಾರ
(D) ಕೊಯಿಲಾಂಡಿ

57. ವಿದ್ಯುಚ್ಛಕ್ತಿ ಆಂದೋಳನ ನಡೆದಿದ್ದೆಲ್ಲಿ?
(A) ತಿರುವನಂತಪುರಂ, 1936 ರಲ್ಲಿ
(B) ತ್ರಿಚೂರ್, 1936 ರಲ್ಲಿ
(C) ಎರ್ನಾಕುಲಂ, 1936 ರಲ್ಲಿ
(D) ಅಲೆಪ್ಪಿ 1936 ರಲ್ಲಿ

58. ಸಾಧುಜನ ಸಹಾಯಕ ಸಭೆಯನ್ನು ಸ್ಥಾಪಿಸಿದವರು ಯಾರು?
(A) ಶ್ರೀ ನಾರಾಯಣ ಗುರು
(B) ಅಯ್ಯಂಗಾಲಿ
(C) ಕುಮಾರಗುರು
(D) ಸೋದರ ಅಯ್ಯಪ್ಪನ್

59. ಕೇರಳ ಲಿಂಕನ್ ಎಂದು ಪ್ರಸಿದ್ಧನಾದ ಸಾಮಾಜಿಕ ಸುಧಾರಕರು ಯಾರು?
(A) ವೈಕುಂಟ ಸ್ವಾಮಿಗಳ್
(B) ಚಟ್ಟಂಬಿ ಸ್ವಾಮಿಗಳ್
(C) ವಿ.ಟಿ. ಭಟ್ಟತ್ತಿರಿಪಾದರು
(D) ಪಂಡಿತ್ ಕರುಪ್ಪನ್

60. ವೈಕ್ಕಂ ಸತ್ಯಾಗ್ರಹಕ್ಕೆ ಸಂಬಂಧಿಸಿದ ಪ್ರಮುಖ ಘಟನೆ ಯಾವುದು?
(A) ಬಿಡುಗಡೆಯ ಹೋರಾಟ
(B) ಸತ್ಯಾಗ್ರಹ
(C) ಭೋಜನ (ಪಂಕ್ತಿ ಭೋಜನಮ್)
(D) ಸುವರ್ಣ ಜಾಥಾ

61. ಮನುಷ್ಯರಲ್ಲಿ ಈ ಕೆಳಗಿನ ಯಾವುದು ದೇಹದ ಪ್ರಮುಖ ವಿಸರ್ಜನಾಂಗ?
(A) ಮೂತ್ರ ಪಿಂಡಗಳು
(B) ಚರ್ಮ
(C) ಪಿತ್ತ ಜನಕಾಂಗ
(D) ಶ್ವಾಸಕೋಶಗಳು

62. ಉಸಿರಾಟದ ಕ್ರಿಯೆಯಲ್ಲಿ ನಡೆಯುವ ಪ್ರಕ್ರಿಯೆಗಳಲ್ಲಿ ಸರಿಯಾಗಿರುವುದನ್ನು ಸೂಚಿಸಿರಿ :
1. ಶ್ವಾಸಕೋಶಗಳಿಂದ ಗಾಳಿಯು ಹೊರದೂಡಲ್ಪಡುತ್ತದೆ
2. ಮೂತ್ರಕೋಶದ ಗಾತ್ರ ಹಿಗ್ಗುತ್ತದೆ
3. ಮೂತ್ರಕೋಶದಲ್ಲಿ ಗಾಳಿಯ ಒತ್ತಡ ಹೆಚ್ಚುತ್ತದೆ
4. ಮೂತ್ರಕೋಶದಲ್ಲಿ ಗಾಳಿಯ ಒತ್ತಡ ಕಡಿಮೆಯಾಗುತ್ತದೆ
(A) 1 ಮತ್ತು 2
(B) 2 ಮತ್ತು 3
(C) 1 ಮತ್ತು 3
(D) 1 ಮತ್ತು 4

63. ಯಾವ ವಿಟಮಿನ್ ಕೊರತೆಯು ರಿಕೆಟ್ಸ್ (Rickets) ಕಾಯಿಲೆಗೆ ಕಾರಣವಾಗುತ್ತದೆ?
(A) ವಿಟಮಿನ್ ಎ
(B) ವಿಟಮಿನ್ ಸಿ
(C) ವಿಟಮಿನ್ ಬಿ
(D) ವಿಟಮಿನ್ ಡಿ

64. ಈ ಕೆಳಗಿನವುಗಳಲ್ಲಿ ಯಾವುದು ವೈರಸ್‌ನಿಂದ ಉಂಟಾಗುತ್ತದೆ?

(A) ಕ್ಷಯ ರೋಗ, ನಿಪ್ಪಾ
(B) ನಿಪ್ಪಾ, ಏಡ್ಸ್
(C) ಏಡ್ಸ್, ಮಲೇರಿಯಾ
(D) ಕ್ಷಯರೋಗ, ಏಡ್ಸ್

65. ನವ ಕೇರಳ ರಾಜ್ಯದ ಈ ಕೆಳಗಿನ ಯಾವ ಯೋಜನೆಯು ಸರ್ಕಾರಿ ಆಸ್ಪತ್ರೆಗಳಲ್ಲಿನ ಮೂಲ ಭೂತ ಸೌಕರ್ಯಗಳನ್ನು ಸುಧಾರಿಸುವುದರ ಮೂಲಕ ಆಸ್ಪತ್ರೆಗಳನ್ನು ''ಜನ–ಸ್ನೇಹಿ''ಯನ್ನಾಗಿ ಮಾಡಲು ಉದ್ದೇಶಿಸಿದೆ?

(A) ಕಾರುಣ್ಯ
(B) ಆರ್ದ್ರಂ
(C) ತಾಲೋಲಂ
(D) ಇವು ಯಾವುದೂ ಅಲ್ಲ

66. ಈ ಕೆಳಗಿನವುಗಳಲ್ಲಿ ಯಾವುದು ಜೈವಿಕ ಅಡುಗೆ ಅನಿಲವಲ್ಲ?

(A) ಕಾರ್ಬನ್ ಡೈ ಆಕ್ಸೈಡ್ (ಇಂಗಾಲಾಮ್ಲ)
(B) ಸಾರಜನಕ
(C) ಮೀಥೈನ್
(D) ಕ್ಲೋರೋ ಫ್ಲೂರೋ ಕಾರ್ಬನ್

67. ಈ ಕೆಳಗಿನವುಗಳಲ್ಲಿ ಯಾವುದು ಅರಣ್ಯನಾಶಕ್ಕೆ ಕಾರಣವಲ್ಲ?

(A) ರಸ್ತೆಗಳ ನಿರ್ಮಾಣ
(B) ಇಂಧನಕ್ಕಾಗಿ ಹೆಚ್ಚುತ್ತಿರುವ ಬೇಡಿಕೆ
(C) ವಾಣಿಜ್ಯ ವ್ಯವಹಾರಗಳ ಬೆಳವಣಿಗೆ
(D) ಸಸ್ಯ ಸಂರಕ್ಷಣೆ

68. ಈ ಕೆಳಗಿನವುಗಳಲ್ಲಿ ಯಾವುದು ಅರಣ್ಯಗಳಿಂದ ಉತ್ಪತ್ತಿಯಾಗುವ ವಸ್ತುವಲ್ಲ?

(A) ಅಂಟು (ಗೋಂದು)
(B) ಪ್ಲೈವುಡ್
(C) ಪೆಟ್ರೋಲ್
(D) ಮೇಣ

69. ಕೇರಳದಲ್ಲಿನ ಮಣ್ಣೂತಿ ಎಂಬ ಸ್ಥಳದಿಂದ ಉತ್ಪಾದನೆ ಆಗುತ್ತಿರುವ ಹಾಗಲಕಾಯಿಯ ಬೀಜವು ಯಾವುದು?

(A) ಪವಿತ್ರಾ
(B) ಪ್ರಿಯಾಂಕಾ
(C) ಅರ್ಕಾ
(D) ಮುಕ್ತಿ

70. ''ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ರಿಸರ್ಚ್'' (ಐ.ಐ.ಎಸ್.ಆರ್) ಇರುವ ಸ್ಥಳ ಯಾವುದು?

(A) ಕ್ಯಾಲಿಕಟ್ (ಕಲ್ಲಿಕೋಟೆ)
(B) ಕಾಸರ್‌ಕೋಡ್
(C) ಕೊಟ್ಟಾಯಂ
(D) ಇಡುಕ್ಕಿ

71. ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆ ತಪ್ಪಾಗಿದೆಯೆಂದು ತಿಳಿಸಿ :

1. ಒಂದು ಪರಮಾಣುವಿನಲ್ಲಿರುವ ಎಲೆಕ್ಟ್ರಾನ್ ಋಣಾತ್ಮಕ ವಿದ್ಯುದಂಶ ಹೊಂದಿರುವ ಕಣವಾಗಿದೆ
2. ಒಂದು ಪರಮಾಣುವಿನಲ್ಲಿರುವ ನ್ಯೂಕ್ಲಿಯಾನ್‌ಗಳ ಸಂಖ್ಯೆಯನ್ನು ಅದರ ಮಾಸ್ ನಂಬರ್ (ದ್ರವ್ಯರಾಶಿ) ಸೂಚಿಸುತ್ತದೆ
3. ಒಂದು ಪರಮಾಣುವಿನ ನ್ಯೂಕ್ಲಿಯಸ್‌ನ್ನು ರೂದರ್ ಫೋರ್ಡ್ ವಿಜ್ಞಾನಿಯು ಕಂಡುಹಿಡಿದನು.
4. ಒಂದು ಮೂಲವಸ್ತುವನ್ನು ಒಂದೇ ಪರಮಾಣು ಸಂಖ್ಯೆಯನ್ನು ಹೊಂದಿದ್ದು ವಿಭಿನ್ನ ಮಾಸ್ ನಂಬರ್ (ದ್ರವ್ಯರಾಶಿ ಸಂಖ್ಯೆ) ಉಳ್ಳವುಗಳನ್ನು ಐಸೋಬಾರ್ ಎಂದು ಕರೆಯುತ್ತಾರೆ.

(A) 1 ಮತ್ತು 2
(B) 2 ಮತ್ತು 4
(C) 2 ಮತ್ತು 3
(D) 4 ಮಾತ್ರ

72. ಸತುವಿನ ಮಿಶ್ರಣದ ಶುದ್ಧೀಕರಣದಲ್ಲಿ ಯಾವ ವಿಧಾನವನ್ನು ಬಳಸುವರು?

(A) ಆಯಸ್ಕಾಂತದ ವಿಭಾಗೀಕರಣ

(B) ಹರಿಯುವ ನೀರಿನಲ್ಲಿ ಶುದ್ಧೀಕರಿಸುವುದು

(C) ತೇಲುವಿಕೆ ಪ್ರಕ್ರಿಯಾ ವಿಧಾನ

(D) ಲೀಚಿಂಗ್ (Leaching)

73. ಕ್ಯಾಲ್ಸಿಯಂ ಲೋಹದ ( $_{20}$Ca) ಹೊರಗಿನ ಶೆಲ್ ಸಂಖ್ಯೆ ಯಾವುದು?

(A) 4

(B) 2

(C) 3

(D) 1

74. ಡ್ಯುಟೇರಿಯಂನಲ್ಲಿರುವ ನ್ಯೂಟ್ರಾನ್‌ಗಳ ಸಂಖ್ಯೆ :

(A) 0

(B) 1

(C) 2

(D) 3

75. ಆಹಾರ ಪದಾರ್ಥಗಳನ್ನು ಸಂರಕ್ಷಿಸಲು ಉಪಯೋಗಿಸುವ ರಾಸಾಯನಿಕ ಪದಾರ್ಥ :

(A) ಸ್ಯಾಕರಿನ್

(B) ಸೋಡಿಯಂ ಬೆಂಜೋಯೇಟ್

(C) ಸೋಡಿಯಂ ಹೈಡ್ರಾಕ್ಸೈಡ್

(D) ಸೋಡಿಯಂ ಕಾರ್ಬೋನೈಟ್

76. ಒಂದು ಚಲಿಸುವ ವಸ್ತುವಿನ ವೇಗವನ್ನು ದ್ವಿಗುಣಗೊಳಿಸಿದಾಗ, ಅದರ ಚಲನ ಶಕ್ತಿಯಲ್ಲಿ ಆಗುವ ಬದಲಾವಣೆ ಏನು ?

(A) ದ್ವಿಗುಣಗೊಳ್ಳುತ್ತದೆ

(B) ನಾಲ್ಕು ಪಟ್ಟು ಹೆಚ್ಚುತ್ತದೆ

(C) ಚಲನ ಶಕ್ತಿ ಶೂನ್ಯವಾಗುತ್ತದೆ

(D) ಯಾವುದೇ ಬದಲಾವಣೆಯಿಲ್ಲ

77. ಒಂದು ವಸ್ತುವಿನ ಮೇಲೆ ಭೂಮಿಯಿಂದ ಉಂಟಾಗುವ ಗುರುತ್ವಾಕರ್ಷಣ ಬಲವೇನು?

(A) ಸಾಂದ್ರತೆ

(B) ದ್ರವ್ಯರಾಶಿ

(C) ತೂಕ

(D) ಇವು ಯಾವುದೂ ಅಲ್ಲ

78. ಸೌರಶಕ್ತಿಯನ್ನು ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸುವ ಸಾಧನವಾಗಿದೆ ಇದು :

(A) ಸೌರಶಕ್ತಿಯಿಂದ ನೀರನ್ನು ಕಾಯಿಸುವ ಉಪಕರಣ

(B) ಮೈಕ್ರೋಫೋನ್

(C) ವಿದ್ಯುಚ್ಛಕ್ತಿ ಜನಕ

(D) ಡೈನಾಮೊ

79. ಈ ಕೆಳಗಿನವುಗಳಲ್ಲಿ ಯಾವ ಬಣ್ಣಕ್ಕೆ ಅತಿ ಹೆಚ್ಚು ತರಂಗ ದೂರವಿದೆ?

(A) ಕಿತ್ತಳೆ ಬಣ್ಣ

(B) ನೀಲಿ ಬಣ್ಣ

(C) ಹಸಿರು ಬಣ್ಣ

(D) ನೇರಳೆ ಬಣ್ಣ (Violet)

80. ಉಷ್ಣತೆ ಅಳೆಯುವಲ್ಲಿನ ಯೂನಿಟ್ ಯಾವುದು?

(A) ಜೌಲ್

(B) ಕೆಲ್ವಿನ್

(C) ವ್ಯಾಟ್

(D) ಡೈನ್

**81.** ಇವುಗಳಲ್ಲಿ ಹೊಂದದ ಸಂಖ್ಯೆ ಗುರುತಿಸಿ :

(A) 36 (B) 100
(C) 125 (D) 9

**82.** 13.01 + 14.032 – 10.43 =

(A) 16.612 (B) 16.606
(C) 15.066 (D) 16.660

**83.** ದೂರ : ಕಿ.ಮೀ. : : ಶಂಖು ನ

(A) ವ್ಯಾಸ (arc) (B) ಡಿಗ್ರೀ
(C) ತ್ರಿಭುಜ (D) ಕೋನಮಾಪಿ

**84.** ಈ ಕೆಳಗಿನ ಶ್ರೇಣಿಯಲ್ಲಿ ಬರುವ ಮುಂದಿನ ಸಂಖ್ಯೆಯನ್ನು ಕಂಡುಹಿಡಿಯಿರಿ :

7, 11, 19, 31, 47, ———

(A) 57 (B) 78
(C) 59 (D) 67

**85.** ಒಂದು ತಿಂಗಳಿನ 3ನೇ ದಿನ ಶುಕ್ರವಾರವಾಗಿದೆ. ಹಾಗಾದರೆ ಅದೇ ತಿಂಗಳಿನ 21ನೇ ದಿನದಿಂದ ಮುಂದಿನ ನಾಲ್ಕನೇ ದಿನ ಯಾವ ವಾರವಾಗುತ್ತದೆ?

(A) ಶನಿವಾರ (B) ಬುಧವಾರ
(C) ಶುಕ್ರವಾರ (D) ಸೋಮವಾರ

**86.** ಒಂದು ತರಗತಿಯಲ್ಲಿ ಸರಳಾಳ ಸ್ಥಾನ ಮೊದಲಿನಿಂದ 9ನೆಯದಾಗಿದೆ ಮತ್ತು ಕೊನೆಯಿಂದ 38ನೆಯದಾಗಿದೆ. ಹಾಗಾದರೆ ಆ ತರಗತಿಯಲ್ಲಿ ಒಟ್ಟು ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ?

(A) 45 (B) 46
(C) 47 (D) 44

**87.** ಎರಡು ಸಂಖ್ಯೆಗಳ ಲ.ಸಾ.ಅ 7700 ಆಗಿದೆ ಮತ್ತು ಅವೇ ಎರಡು ಸಂಖ್ಯೆಗಳ ಮ.ಸಾ.ಅ. 11 ಆಗಿರುತ್ತದೆ. ಅವುಗಳಲ್ಲಿ ಒಂದು ಸಂಖ್ಯೆಯು 275 ಆಗಿದೆ. ಹಾಗಾದರೆ ಉಳಿದ ಇನ್ನೊಂದು ಸಂಖ್ಯೆ ಯಾವುದು?

(A) 279 (B) 283
(C) 308 (D) 318

**88.** $44\frac{1}{3} + 10\frac{1}{3} - 8\frac{1}{3} =$

(A) $46\frac{1}{3}$ (B) $43\frac{1}{3}$
(C) $32\frac{1}{3}$ (D) $38\frac{1}{3}$

**89.** ಅಂತಿಮ ವಾರ್ಷಿಕ ಪರೀಕ್ಷೆಯಲ್ಲಿ ಅಮ್ಮು ಗಳಿಸಿದ ಅಂಕಗಳು ಹೀಗಿವೆ : ಗಣಿತ, ವಿಜ್ಞಾನ, ಮಲೆಯಾಳಂ, ಹಿಂದಿ ಮತ್ತು ಇಂಗ್ಲೀಷ್‌ನಲ್ಲಿ ಅನುಕ್ರಮವಾಗಿ 32, 45, 50, 28 ಮತ್ತು 40 ಆಗಿವೆ. ಹಾಗಾದರೆ ಅವಳಿಗೆ ಬಂದಿರುವ ಸರಾಸರಿ ಅಂಕಗಳೆಷ್ಟು?

(A) 77 (B) 68
(C) 39 (D) 40

**90.** 15625 ರ ವರ್ಗಮೂಲ ಎಷ್ಟು?

(A) 125 (B) 225
(C) 75 (D) 155

91. 240 ಮೀಟರ್ ಉದ್ದವಿರುವ ರೈಲು ಒಂದು ಕಂಬವನ್ನು ದಾಟಿಹೋಗಲು 24 ಸೆಕೆಂಡುಗಳಷ್ಟು ಸಮಯ ತೆಗೆದುಕೊಳ್ಳುತ್ತದೆ. ಹಾಗಾದರೆ ಆ ರೈಲು 750 ಮೀಟರ್ ಉದ್ದವಿರುವ ಪ್ಲಾಟ್‌ಫಾರಂನ್ನು ದಾಟಿಹೋಗಲು ಎಷ್ಟು ಸಮಯ ತೆಗೆದುಕೊಳ್ಳುವುದು?

(A) 96 ಸೆಕೆಂಡುಗಳು
(B) 89 ಸೆಕೆಂಡುಗಳು
(C) 76 ಸೆಕೆಂಡುಗಳು
(D) 99 ಸೆಕೆಂಡುಗಳು

92. ಒಬ್ಬ ಹೆಂಗಸು ಒಬ್ಬ ಗಂಡಸಿಗೆ ಒಂದು ಫೋಟೋ ತೋರಿಸಿ ಹೀಗೆ ಹೇಳಿದಳು : "ಆತನ ಸೋದರನ ತಂದೆಯು ನನ್ನ ಅಜ್ಜನ ಒಬ್ಬನೇ ಒಬ್ಬ ಮಗ". ಹಾಗಾದರೆ ಆ ಗಂಡಸಿಗೂ ಮತ್ತು ಹೆಂಗಸಿಗೂ ಇರುವ ಸಂಬಂಧವೇನು?

(A) ಮಗ
(B) ಮಗಳು
(C) ಸೋದರ
(D) ತಂದೆ

93. ಒಂದು ಸಾಂಕೇತಿಕ ಭಾಷೆಯಲ್ಲಿ "SAD = 814", "CAT = 317", "EAR = 519" ಎಂದು ಬರೆಯಲಾಗಿದೆ ಹಾಗಾದರೆ "DEAR" = ಏನು?

(A) 8147
(B) 4519
(C) 4187
(D) 5419

94. 500 ರೂಗಳ ಮೂಲಬೆಲೆಯ ಕುರ್ಚಿಯೊಂದನ್ನು ಶೇ. 10 ರ ಸೋಡಿ ಬಿಟ್ಟು ಮಾರಿದಾಗ ಆಗುವ ನಷ್ಟವೇನು?

(A) 15 ರೂ.ಗಳು
(B) 40 ರೂ.ಗಳು
(C) 50 ರೂ.ಗಳು
(D) 60 ರೂ.ಗಳು

95. $3^3 \times 2 - 4 + 14 =$

(A) 60
(B) 46
(C) 28
(D) 64

96. ರವಿಯು ರಾಣಿಗಿಂತ 10 ವರ್ಷ ಹಿರಿಯನು. ಸುಮಾ ರವಿಗಿಂತ 8 ವರ್ಷ ಕಿರಿಯಳು. ಸುಮಾಳ ವಯಸ್ಸು 64 ವರ್ಷಗಳಾದರೆ ರಾಣಿಯ ವಯಸ್ಸೆಷ್ಟು?

(A) 82
(B) 66
(C) 56
(D) 62

97. ಗುಂಪಿಗೆ ಸೇರದ್ದನ್ನು ಗುರುತಿಸಿ :

(A) 100
(B) $10^2$
(C) $4^2 + 3^2$
(D) $6^2 + 8^2$

98. "$ = ×"; "@ = –"; "# = +"; "% = ÷" ಈ ರೀತಿ ಇದ್ದಾಗ 23 $ 25 % 5 # 10 @ 3 = ಎಷ್ಟು?

(A) 122
(B) 124
(C) 114
(D) 285

99. $19x^3 = 216$ ಆದರೆ, $x$ ಬೆಲೆ ಎಷ್ಟು?

(A) 4
(B) 5
(C) 6
(D) 8

100. 27 : 3 : : 1000 :

(A) 10
(B) 5
(C) 100
(D) 90

**SPACE FOR ROUGH WORK**

SPACE FOR ROUGH WORK